***ಸಾಕ್ಷಿಯನ್ನು ದಿಃ 06.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದಃ-***

***ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ನಾನೇ ಪ್ರಮಾಣೀಕರಿಸಿದ ನನ್ನ ಶಪಥ ಪತ್ರದ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಹಾಗೂ ಅವುಗಳಲ್ಲಿರುವ ಸಹಿಗಳು ನನ್ನವೇ ಆಗಿವೆ. ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಲಾಗಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಲಾಯಿತು.***

| | |
|---|---|
| *ನಿಪಿ.1* | *ಪ್ರಥಮ ವರ್ತಮಾನ ವರದಿ ಮತ್ತು ದೂರಿನ ದೃಢೀಕೃತ ನಕಲು* |
| *ನಿಪಿ.2* | *ಅಪಘಾತವಾದ ಸ್ಥಳದಲ್ಲಿ ತಯಾರಿಸಿದ ಮಹಜರು* |
| *ನಿಪಿ.3* | *ಐಎಂವಿ ವರದಿಯ ದೃಢೀಕೃತ ನಕಲು* |
| *ನಿಪಿ.4* | *6 ಪುಟಗಳ ಅಂತಿಮ ವರದಿಯ ದೃಢೀಕೃತ ನಕಲು* |
| *ನಿಪಿ.5* | *ಗಾಯದ ಪ್ರಮಾಣಪತ್ರದ ದೃಢೀಕೃತ ನಕಲು* |
| *ನಿಪಿ.6* | *ಗಾಯಳುವಿನ ಹೇಳಿಕೆಗಳು, ಸಾಕ್ಷೀದಾರರ ಹೇಳಿಕೆಗಳು ಒಟ್ಟು 11 ಪುಟಗಳನ್ನು ಒಟ್ಟಾಗಿ* |
| *ನಿಪಿ.7* | *ವೈದ್ಯಕೀಯ ಚಿಕಿತ್ಸೆಯ 23 ಬಿಲ್ಲುಗಳು ಒಟ್ಟಾಗಿ* |
| *ನಿಪಿ.8* | *09 ವೈದ್ಯರ ಸಲಹಾ ಚೀಟಿಗಳು ಒಟ್ಟಾಗಿ* |
| *ನಿಪಿ.9* | *ಬಿಡುಗಡೆಯ ಸಾರಾಂಶ* |
| *ನಿಪಿ.10* | *ಅರ್ಜಿದಾರರ ನೋಟರಿ ದೃಢೀಕೃತ ಪ್ಯಾನ್ ಕಾರ್ಡು* |
| *ನಿಪಿ.11* | *ಅರ್ಜಿದಾರರ ನೋಟರಿ ದೃಢೀಕೃತ ಅಧಾರ್ ಕಾರ್ಡು* |
| *ನಿಪಿ.12* | *ವ್ಯವಸ್ಥಾಪಕರು ದೃಢೀಕರಿಸಿದ ಬ್ಯಾಂಕ್ ಪಾಸ್ ಪುಸ್ತಕ* |

ನಿಪಿ. 13 ಮೂರು ಎಕ್ಸರೇ ಫಿಲಂಗಳನ್ನು ಒಟ್ಟಾಗಿ, ಎಂದು ಗುರುತಿಸಲಾಯಿತು.

ನಿಪಿ.10 ರಿಂದ 12ರ ಅಸಲು ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ನ್ಯಾಯಾಲಯ ಸ್ವತಃ ಪರಿಶೀಲನೆ ಮಾಡಿ ಮುಕ್ತ ನ್ಯಾಯಾಲಯದಲ್ಲಿ ಅರ್ಜಿದಾರರ ವಶಕ್ಕೆ ಹಿಂದಿರುಗಿಸಲಾಗಿರುತ್ತದೆ.

**1ನೇ ಎದುರುದಾರರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿರುತ್ತಾರೆ. ಆದೇಶ ಪುಟ ಪರಿಶೀಲಿಸಿದಾಗ 1ನೇ ಎದುರುದಾರರು ತಮ್ಮ ತಕರಾರನ್ನು ಸಲ್ಲಿಸಿಲ್ಲ. ಆದ್ದರಿಂದ ಅವರ ಮನವಿಯನ್ನು ಪುರಸ್ಕರಿಸಲು ಸಕಾರಣಗಳು ಕಂಡು ಬಂದಿಲ್ಲ. ತತ್ಪರಿಣಾಮವಾಗಿ 1ನೇ ಎದುರುದಾರರ ಪರ ವಕೀಲರ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**2ನೇ ಎದುರುದಾರರ ಪರ ವಕೀಲರು ಗೈರು ಹಾಜರು, ನ್ಯಾಯಾಲಯ ಸ್ವತಃ ಪಾಟೀ ಸವಾಲಿಗಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).**

**ಸಾ.ಓ.ಹೇ.ಕೆ.ಸ.ಇ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**